# ಫೆನೆಸ್ಟಾ ಹೊಸ ಶೋ ರೂಂ ಆರಂಭ

**ಮಂಗಳೂರು:** ಭಾರತದ ಅತಿದೊಡ್ಡ ಕಿಟಕಿ ಮತ್ತು ಬಾಗಿಲುಗಳ ಬ್ರಾಂಡ್ ಆಗಿರುವ ಫೆನೆಸ್ಟಾದ ಹೊಸ ಎಕ್ಸ್‌ಕ್ಲೂಸಿವ್ ಶೋರೂಂ ನಗರದ ನಂತೂರು ಬಿಕರ್ನಕಟ್ಟೆಯ ಹೂವಿನ ಮಾರುಕಟ್ಟೆ ಬಳಿ ಆರಂಭವಾಗಿದೆ. ಇದು ಅತ್ಯುನ್ನತ ದರ್ಜೆಯ ಯುಪಿವಿಸಿ ಕಿಟಕಿ ಹಾಗೂ ಬಾಗಿಲುಗಳ ಸಂಗ್ರಹವನ್ನು ಹೊಂದಿದೆ.

ಮಂಗಳೂರು ಶೋರೂಂ ಉದ್ಘಾಟನೆ ಮಾಡಿ ಮಾತನಾಡಿದ ಫೆನೆಸ್ಟಾ ಬ್ಯುಸಿನೆಸ್ ಹೆಡ್ ಸಾಕೇತ್ ಜೈನ್, ಫೆನೆಸ್ಟಾದ ಕಾರ್ಯತಂತ್ರ ಪ್ರಮುಖವಾಗಿ ಎರಡು ಆಯಾಮಗಳನ್ನು ಹೊಂದಿದೆ. ಅವುಗಳೆಂದರೆ, ಸ್ಪಷ್ಟ ಗ್ರಾಹಕ ಕೇಂದ್ರಿತ ದೃಷ್ಟಿಕೋನ ಮತ್ತು ಹೆಚ್ಚು ಹೆಚ್ಚು ಗ್ರಾಹಕರನ್ನು ತಲುಪುದಾಗಿದೆ. ಫೆನೆಸ್ಟಾ ಉತ್ಪನ್ನಗಳನ್ನು ಗ್ರಾಹಕರ ಅಗತ್ಯತೆ ಮತ್ತು ಪರಿಸರಾತ್ಮಕ ಅಂಶಗಳಾದ ಶಬ್ದ, ಮಳೆ, ದೂಳು ಮತ್ತು ಮಾಲಿನ್ಯವನ್ನು ಗಮನದಲ್ಲಿಟ್ಟುಕೊಂಡು ತಯಾರಿಸಲಾಗಿದೆ. ಇದು ಕರ್ನಾಟಕದ ಮೊಟ್ಟಮೊದಲ ಮಳಿಗೆಯಾಗಿದ್ದು, 2020ರ ಡಿಸೆಂಬರ್ ಒಳಗಾಗಿ ದೇಶದ ಎಲ್ಲ ರಾಜ್ಯಗಳಿಗೆ ಇದನ್ನು ವಿಸ್ತರಿಸಲಾಗುವುದು ಎಂದರು.